ಕವಿತೆ

ಇಂಗ್ಲಿಷ್ ಮೂಲ: **ಜಾನ್ ಡನ್**
ಕನ್ನಡ ಭಾವಾನುವಾದ: **ಬಿ.ಆರ್.ಲಕ್ಷ್ಮಣರಾವ್**
ಕಲೆ: ರೂಪಶ್ರೀ ಕಲ್ಲಿಗನೂರು

# ಸಾವೇ, ಬೀಗಬೇಡ



ಸಾವೇ, ಬೀಗಬೇಡ,
ಉಗ್ರ ಪ್ರತಾಪಿ ನೀನೆಂದು
ಕೆಲವರು ಕೊಂಡಾಡಿದ್ದಾರೆಂದು.
ಅದು ಅಪ್ಪಟ ಸುಳ್ಳು.

ಯಾಕೆಂದರೆ
ನಾ ಕೊಂದೆ
ಎಂದು ನೀನಂದುಕೊಂಡವರು
ಸತ್ತಿಲ್ಲ.
ಬಡಪಾಯಿ ಸಾವೇ,
ನೀ ಕೊಲ್ಲಲಾರೆ
ನನ್ನನ್ನೂ.

ಎಷ್ಟೊಂದು ಮುದ ನೀಡುತ್ತವೆ
ನಿನ್ನ ಪ್ರತಿರೂಪಗಳಾದ
ವಿಶ್ರಾಂತಿ ಮತ್ತು ನಿದ್ದೆ
ದೇಹಕ್ಕೆ, ಮನಸ್ಸಿಗೆ!
ಅಂದ ಮೇಲೆ,
ಸಿಗಬೇಕಲ್ಲವೆ ನಿನ್ನಿಂದ
ಇನ್ನೂ ಮಿಗಿಲಾದ ಆನಂದ?

ನಿಜ, ನಮ್ಮ ಅತ್ಯುತ್ತಮರೆಲ್ಲ
ಗಂಟುಮೂಟೆ ಕಟ್ಟಿ
ಹೊರಟಿದ್ದಾರೆ ನಿನ್ನೊಂದಿಗೆ
ಧಾವಂತದಿಂದ.

ಅದು ಕೇವಲ
ಅವರ ದೇಹಗಳಿಗೆ ಬಿಡುವು,
ಆತ್ಮಗಳಿಗೆ ಬಿಡುಗಡೆ.

ವಿಧಿಯ, ಅದೃಷ್ಟದ, ದೊರೆಗಳ, ಹತಾಶರ
ಗುಲಾಮ ನೀನು.

ವಿಷ, ಯುದ್ಧ, ರೋಗ
ನಿನ್ನಾಲಯಗಳು.
ಮದ್ಯ, ಮಾಟಗಳೂ ನಿದ್ದೆ ತರಬಲ್ಲವು
ನಿನ್ನಾಘಾತಕ್ಕಿಂತ ಮಿಗಿಲಾಗಿ.
ಹಾಗಾಗಿ,ಸಾವೇ, ಹೀಗೇಕೆ ಬೀಗುವೆ?

ಒಂದು ಕಿರುನಿದ್ದೆಯ ನಂತರ
ಎಚ್ಚರಗೊಳ್ಳುವೆವು ನಾವು
ಅನಂತವಾಗಿ.

ಅಲ್ಲಿ ನಿನಗಿಲ್ಲ ತಾವು,
ಸಾವೇ, ಅದು ನಿನ್ನ ಸಾವು.